ಕ್ಷೇತ್ರವನ್ನು ಪ್ರವೃತ್ತಿಯಾಗಿ ಆಯ್ಕೆ ಮಾಡಿಕೊಂಡಿದ್ದೇನೆ' ಎನ್ನುತ್ತಾರೆ.

ಒಂದು ಕಡೆ ಸಾಫ್ಟ್‌ವೇರ್ ಎಂಜಿನಿಯರ್ ಆಗಿ, ಮತ್ತೊಂದೆಡೆ ಮಾಡೆಲಿಂಗ್ ಆಗಿ ಸಮಯ ಹೊಂದಾಣಿಕೆ ಮಾಡಿಕೊಳ್ಳುವುದು ಕಷ್ಟವಾಗುವುದಿಲ್ಲವೇ ಎಂದೊಡನೆ ಅವರಿಂದ ಬಂದ ಉತ್ತರ — 'ಕಠಿಣ ಪರಿಶ್ರಮ ಇಲ್ಲದೇ ಯಶಸ್ಸಿನ ಉತ್ತುಂಗ ಏರಲು ಸಾಧ್ಯವೇ ಇಲ್ಲ' ಎಂಬುದು.

ಸಮಯ ಹೊಂದಾಣಿಕೆಯ ಬಗ್ಗೆ ಮಾತು ಮುಂದುವರೆಸಿದ ಕೊಮಿಕಾ, 'ಒಂದೆಡೆ ಸಾಫ್ಟ್‌ವೇರ್ ಎಂಜಿನಿಯರ್ ಆಗಿಯೂ ಮಾಡೆಲಿಂಗ್ ಕ್ಷೇತ್ರದಲ್ಲಿ ಇದ್ದೇನೆ ಎಂದರೆ ಅದಕ್ಕೆ ಕುಟುಂಬ ಹಾಗೂ ನಾನು ಕೆಲಸ ಮಾಡುತ್ತಿರುವ ಕಂಪನಿಯ ಸಹಕಾರವಿದೆ. ಫ್ಯಾಷನ್ ಶೋಗಳು ಇದ್ದಾಗ ಮುಂಚಿತವಾಗಿಯೇ ಕಂಪನಿಗೆ ತಿಳಿಸುತ್ತೇನೆ. ನನ್ನನ್ನು ಪ್ರೋತ್ಸಾಹಿಸುವ ಸಲುವಾಗಿ ಕಂಪನಿಯೂ ಅದಕ್ಕೆ ಅನುಕೂಲ ಮಾಡಿಕೊಡುತ್ತದೆ. ಜೊತೆಗೆ ಕುಟುಂಬವು ಎಲ್ಲ ಸಮಯದಲ್ಲೂ ನನ್ನ ಬೆನ್ನಿಗೆ ನಿಂತಿದೆ. ಹೀಗಾಗಿ, ಸಮಯ ಹೊಂದಾಣಿಕೆ ನನಗೆ ಕಷ್ಟವೆನಿಸದು' ಎಂದರು.

ಕಠಿಣ ಶ್ರಮಕ್ಕೆ ಪರ್ಯಾಯ ಮಾರ್ಗ ಮತ್ತೊಂದಿಲ್ಲ ಎನ್ನುವ ಅವರು, 'ಯಾವುದೇ ಕೆಲಸ ಮಾಡಿದರೂ ಅತ್ಯಂತ ಶ್ರದ್ಧೆ ಹಾಗೂ ನಿಷ್ಠೆಯಿಂದ ಮಾಡುತ್ತೇನೆ. ಆಗಿದ್ದರೆ ಮಾತ್ರ ಯಶಸ್ಸು ಸಿಗುತ್ತದೆ ಎಂದು ನಂಬಿದ್ದೇನೆ. ಈ ವಿಚಾರದಲ್ಲಿ ಯಾವುದೇ ರಾಜಿ ಆಗುವುದಿಲ್ಲ' ಎಂದು ವಿಶ್ವಾಸದಿಂದ ನುಡಿಯುತ್ತಾರೆ. ಮಾಡೆಲಿಂಗ್ ಕ್ಷೇತ್ರದಲ್ಲಿ ತಮ್ಮನ್ನು ಇಂತಹದ್ದೇ ರೀತಿಯ ಬಟ್ಟೆಗೆಂದು ಸೀಮಿತಗೊಳಿಸದೆ ಡೀಸೆಂಟ್ ಆಗಿ ಕಾಣುವ ಎಲ್ಲ ರೀತಿಯ ಬಟ್ಟೆಗಳನ್ನು ತೊಟ್ಟು ರ್‍ಯಾಂಪ್ ಮೇಲೆ ನಡುಬಳುಕಿಸಲು ಇಚ್ಛಿಸುತ್ತಾರಂತೆ.

### ಫ್ಯಾಷನ್ ಇಸ್ ಮೈ ಪ್ಯಾಷನ್

ಚಿಕ್ಕಂದಿನಿಂದಲೂ ನನಗೆ ಫ್ಯಾಷನ್ ಬಗ್ಗೆ ವಿಶೇಷವಾದ ಒಲವು ಬೆಳೆಸಿಕೊಂಡಿರುವ ಕೊಮಿಕಾಗೆ ಅದರ ತೀವ್ರತೆ ತಾರಕಕ್ಕೇರಿದ್ದು ಕಾಲೇಜು ದಿನಗಳಲ್ಲಂತೆ.

'ಫ್ಯಾಷನ್ ಇಸ್ ಮೈ ಪ್ಯಾಷನ್' ಆಗಿಬಿಟ್ಟಿದೆ. ಫ್ಯಾಷನ್ ಮಾಡೆಲ್ ಆಗಬೇಕೆಂಬುದು ನನ್ನ ಕನಸಾಗಿತ್ತು. ಆ ಕನಸೀಗ ನನಸಾಗಿದೆ. ಈಗ ಸೂಪರ್‌ಮಾಡೆಲ್ ಆಗಬೇಕೆಂಬ ಹೆಬ್ಬಯಕೆಯಿದೆ. ಮಾಡೆಲಿಂಗ್ ಕ್ಷೇತ್ರ ಬರೀ ಸೌಂದರ್ಯದ ಮೇಲೆ ನೆಲೆನಿಂತಿಲ್ಲ. ಅದಕ್ಕಿಂತ ಹೆಚ್ಚಿನದಾಗಿ ಏನನ್ನೋ ವೃತ್ತಿ ಬಯಸುತ್ತಿದೆ. ಅದರ ಹುಡುಕಾಟದಲ್ಲಿದ್ದೇನೆ' ಎನ್ನುತ್ತಾರೆ.

'ಕೆಲಸದ ಸಲುವಾಗಿ ಫ್ಲೆಕ್ಸಿಬಲ್ ಆಗಿದ್ದೇನೆ. ವೃತ್ತಿಯ ಹೊರತಾಗಿ ಮಾಡೆಲಿಂಗ್‌ಗಾಗಿ ಸಾಕಷ್ಟು ಸಮಯ ಮೀಸಲಿಟ್ಟಿದ್ದೇನೆ. ಕೆಲವೊಮ್ಮೆ ಸಮಯದ ಮಿತಿ ಇಲ್ಲದಂತೆ ಮಾಡೆಲ್ ಕೆಲಸದಲ್ಲಿ ತೊಡಗಿಕೊಂಡಿದ್ದೇನೆ' ಎನ್ನುವ ಕೊಮಿಕಾ ತಮ್ಮ ಭವಿಷ್ಯದ ಯೋಜನೆಗಳ ಬಗ್ಗೆ ಹೇಳುವುದು ಹೀಗೆ:

'ಮಾಡೆಲಿಂಗ್ ಕ್ಷೇತ್ರದಲ್ಲಿ ಅಗಾಧವಾದ ಅವಕಾಶಗಳು ಇವೆ. ಮಿಸ್ ಇಂಡಿಯಾಸ್ ಸೇರಿದಂತೆ ಉತ್ತುಂಗದಲ್ಲಿರುವ ಮಾಡೆಲ್‌ಗಳನ್ನು ಹಿಂಬಾಲಿಸುತ್ತಿದ್ದೇನೆ. ಅವರಂತೆಯೇ ನಾನೂ ಒಬ್ಬಳಾಗಬೇಕೆಂಬ ಸ್ಪಷ್ಟತೆ ನನ್ನಲ್ಲಿದೆ. ಯಶಸ್ವಿ ಬ್ಯೂಟಿಕ್ವೀನ್ ಆಗಿರುವುದು ನನ್ನ ಗುರಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ ದೇಶಕ್ಕೆ ಕೀರ್ತಿ ತರಬೇಕು. ಆ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸುತ್ತಿದ್ದೇನೆ'

'ಬಾಲ್ಯದಿಂದಲೂ ನಾನು ಫ್ಯಾಷನ್ ಅನ್ನು ಪ್ರೀತಿಸುತ್ತಿದ್ದೇನೆ. ಹೊಸತಿಗೆ ಬಹುಬೇಗ ಒಗ್ಗಿಕೊಳ್ಳುವೆ. ಮಾಡೆಲಿಂಗ್ ಹೊರತಾಗಿಯೂ ಟ್ರೆಂಡಿ ಹಾಗೂ ಗ್ಲಾಮ್ ಆಗಿ ನನ್ನನ್ನು ಕಾಣಿಸುವ ಬಟ್ಟೆಗಳನ್ನೇ ಹೆಚ್ಚು ಹಾಕುತ್ತೇನೆ. ಅಗೆಲ್ಲ ನನ್ನ ಫೋಟೊಗಳನ್ನು ನಾನೇ ತೆಗೆದು ಸಂಭ್ರಮಿಸುವುದುಂಟು. ಡಯೆಟ್ ವಿಚಾರಕ್ಕೆ ಬರೋದಾದರೆ, ದೇಹವನ್ನು ಫಿಟ್ ಆಗಿಡಲು ಹೆಚ್ಚು ಆಸಕ್ತಿ ವಹಿಸುತ್ತೇನೆ. ಹೀಗಾಗಿಯೇ ಮಾಡೆಲ್ ಆಗಲು ನಾನು ಫಿಟ್ ಆಗಿದ್ದೇನೆ' ಎನ್ನುತ್ತಾರೆ.

'ದೇಹ ಫಿಟ್ ಆಗಿರಲು ಬೇಕಾದ ಹೆಲ್ದಿ ಡಯೆಟ್ ನಿತ್ಯ ಪಾಲಿಸುವೆ. ಆ ಡಯೆಟ್‌ನ ಕ್ರಮ ನನ್ನ ದೇಹವನ್ನು ಮತ್ತಷ್ಟು ಆಕರ್ಷಕವಾಗಿ ಮಾಡುತ್ತಿದೆ. ನಿತ್ಯದ ಕಾರ್ಯಗಳಲ್ಲಿ ವ್ಯಾಯಾಮವೂ ಒಂದಾಗಿದೆ. ಅದು ನನಗೆ ಶಕ್ತಿ ಹಾಗೂ ಫ್ಲೆಕ್ಸಿಬಲ್ ಆಗಿರಲು ಸಹಾಯ ಮಾಡುತ್ತದೆ. ಜಿಮ್‌ಗೆ ಹೋಗಿ ದೇಹ ದಂಡಿಸುವೆ. ಮಾಡೆಲ್‌ಗೆ ಇದು ತುಂಬಾ ಮಹತ್ವದ್ದು' ಎಂದರು.

ಉತ್ತಮ ಮೈಕಟ್ಟು, ಎತ್ತರ, ಆಕರ್ಷಕ ದೇಹ ಸೌಂದರ್ಯ ಹಾಗೂ ಆಹ್ಲಾದಕರ ನೀಡುವ ಮುಖ ಹೊಂದಿರುವವರು ಈ ಕ್ಷೇತ್ರಕ್ಕೆ ಧಾರಾಳವಾಗಿ ಎಂಟ್ರಿ ಕೊಡಬಹುದು. ಅದಕ್ಕಿಂತಲೂ ಹೆಚ್ಚಿನದಾಗಿ ಎನರ್ಜಿಟಿಕ್ ಆಗಿರಬೇಕು. ಹಾಗಿದ್ದರೆ ಮಾತ್ರ ಕ್ಯಾಮೆರಾ ಮುಂದೆ ಆತ್ಮವಿಶ್ವಾಸದಿಂದ ಹೆಜ್ಜೆ ಹಾಕಲು ಹಾಗೂ ರ್‍ಯಾಂಪ್ ಮೇಲೆ ಎಲ್ಲವನ್ನೂ ಸಮತೋಲನದಿಂದ ನಿಭಾಯಿಸಲು ಸಾಧ್ಯ ಎನ್ನುವುದು ಅವರ ವಾದ. ■

### 'ವುಮೆನ್ಸ್ ಡೇಟೆಟ್ ವಿಥ್ ಫ್ಯಾಷನ್'

ಫ್ಯಾಷನ್ ಲೋಕದಲ್ಲಿ ಛಾಪು ಮೂಡಿಸಲು ಬಯಸುವ ಮಹಿಳೆಯರಿಗೆ ವಿಶೇಷ ವೇದಿಕೆಯನ್ನು ಒದಗಿಸುವ ಸಲುವಾಗಿ ಕಮರ್ ಫಿಲ್ಮ್ ಫ್ಯಾಕ್ಟರಿ ಕಂಪನಿಯು ಮುಂದಾಗಿದೆ. ಈ ಫ್ಯಾಷನ್ ಶೋಗೆ ಕೊಮಿಕಾ ಸಿನ್ಹಾ ರಾಯಭಾರಿ. ಈ ಫ್ಯಾಷನ್ ಶೋ ಮೂಲಕ ಮಹಿಳೆಯರಲ್ಲಿನ ಪ್ರತಿಭೆಯನ್ನು ಅನಾವರಣಗೊಳಿಸುವ ಯತ್ನಕ್ಕೆ ಕೊಮಿಕಾ ಅವರು ಕೈ ಜೋಡಿಸಿದ್ದಾರೆ.

'ಸಂಸಾರದ ಜಂಜಾಟದಿಂದ ಹೊರಬಂದು ತಮ್ಮ ಪ್ರತಿಭೆ ಪ್ರದರ್ಶಿಸಲು ಕಮರ್ ಫಿಲ್ಮ್ ಫ್ಯಾಕ್ಟರಿಯ 'ಎಫ್‌ಟಿವಿ'ಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಫ್ಯಾಷನ್ ಜಗತ್ತಿಗೆ ಪ್ರವೇಶ ಪಡೆಯಬೇಕು ಎನ್ನುವ ಎಲ್ಲ ವರ್ಗದ ಮಹಿಳೆಯರಿಗೆ ಇದು ಒಂದೆಡೆ ವೇದಿಕೆಯಾದರೆ, ಇನ್ನೊಂದೆಡೆ ಯುವ ವಿನ್ಯಾಸಗಾರರಿಗೂ ಅವಕಾಶ ನೀಡುವ ಉದ್ದೇಶವಾಗಿದೆ.

18ರಿಂದ 50 ವರ್ಷದ ಒಳಗಿನ ಎಲ್ಲ ವರ್ಗದ ಮಹಿಳೆಯರಿಗೆ ಇಲ್ಲಿ ಅವಕಾಶವಿದೆ. ಆಯ್ಕೆಯಾದವರಿಗೆ ಒಂದು ತಿಂಗಳು ತರಬೇತಿ ನೀಡಲಾಗುವುದು. ಕ್ಯಾಮೆರಾ ಎದುರಿಸುವುದು, ನಟನೆ ಮುಂತಾದ ವಿಷಯಗಳ ಬಗ್ಗೆ ನುರಿತ ತಜ್ಞರಿಂದ ತರಬೇತಿ ದೊರೆಯಲಿದೆ. ಬಳಿಕ ಆಗಸ್ಟ್‌ನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ.

ಆಸಕ್ತರು ಭಾವಚಿತ್ರದ ಜತೆ ಸಂಪೂರ್ಣ ವಿವರಗಳನ್ನು ಜುಲೈ 30ರ ಒಳಗೆ reethu.kamarfilmfactory@gmail.com ಕಳುಹಿಸಬೇಕು. ಮೊಬೈಲ್ ಸಂಖ್ಯೆ: 9448458041.

